UASB LIBRARY
Jai Kisan
Agri Newspaper Clippings
Monday 08-05-2023
Pg. 1

ತೆಂಗಿನ ಬೆಳೆಯಲ್ಲಿ ರುಗೋಸ್ ಸುರುಳಿ ಸುತ್ತುವ ಬಿಳಿ ನೊಣಗಳ ಕಾಟ ಹೆಚ್ಚಾಗುತ್ತಿದೆ, ಇದನ್ನು ನಿಯಂತ್ರಿಸುವುದು ಹೇಗೆ?

ರೈತ ಮಿತ್ರ

ಮನೋಜ್ ಚಿತ್ರದುರ್ಗ

ತೆಂಗಿನ ಎಲೆಗಳ ಕೆಳಭಾಗದಲ್ಲಿ ಬಿಳಿ ಮೊಟ್ಟೆಯ ಸುರುಳಿಗಳು ಕಾಣಿಸಿಕೊಂಡು, ಆ ಎಲ್ಲ ಸುರುಳಿಗಳು ಒಟ್ಟುಗೂಡಿ ಸಂಪೂರ್ಣವಾಗಿ ತೆಂಗಿನ ಎಲೆಗಳ ಕೆಳಭಾಗವನ್ನು ಆವರಿಸುತ್ತವೆ. ಎಲೆಗಳ ಕೆಳ ಭಾಗದಲ್ಲಿ, ಭಾರಿ ಪ್ರಮಾಣದಲ್ಲಿ ಬಿಳಿ ನೊಣವು ಉತ್ಪಾದಿಸುವ ಬಿಳಿ ಮೇಣದ ವಸ್ತುವಿನ ಹೂಡಿಕೆ ಕಂಡುಬರುತ್ತದೆ. ರಸ ಹೀರುತ್ತಿರುವ ಬಿಳಿ ನೊಣದ ಪಕ್ಕದಲ್ಲಿ ಅಂಟಿನಂತಹ ಸಿಹಿ ದ್ರವ ಸ್ರವಿಸುತ್ತಿರುವುದು ಕಂಡುಬಂದು ಎಲೆಗಳ ಮೇಲ್ಭಾಗದಲ್ಲಿ ಕಪ್ಪು ಮಸಿಯಂತಹ ಶಿಲೀಂಧ್ರವು ಆವರಿಸುತ್ತಿರುವುದು ದೂರದಿಂದಲೇ ಕಂಡುಬರುತ್ತದೆ. **ನಿರ್ವಹಣೆ:** ಎಲೆಗಳ ಮೇಲೆ 1% ಸ್ಟಾರ್ಚ್ (ಗಂಜಿ ತಿಳಿ) ಸಿಂಪರಣೆ ಮಾಡುವುದರಿಂದ ಕಪ್ಪು ಶಿಲೀಂಧ್ರ ಉದುರಿ ಹೋಗುವುದು. ಕಾಂಡಬಂದು ಹಳದಿ ಜಿಗುಟಾದ ಬೋರ್ಡ್ (ಟ್ರಾಪ್) ಅಳವಡಿಸಬೇಕು. ಪರಾವಲಂಬಿ ಜೀವಿ (E. guabeloupae) ನ್ನು ವೃದ್ಧಿಸುವುದನ್ನು ಪ್ರೋತ್ಸಾಹಿಸುವುದು ಮತ್ತು ಪರಾವಲಂಬಿ ಜೀವಿಯ ಕೋಶಗಳನ್ನು, ರುಗೋಸ್ ಬಿಳಿ ನೊಣವು ಏಕಾಏಕಿ ಹೊರಹೊಮ್ಮುವ ವಲಯಗಳಿಗೆ ಚದುರಿಸಿ ಬಿಡುವುದು. ಹೊಸ ಪ್ರದೇಶಗಳಿಗೆ ಕೀಟ ಹರಡುವುದನ್ನು ತಡೆಯಲು, ತೆಂಗಿನ ನರ್ಸರಿಗಳಲ್ಲಿ ಇಮಿಡಾಕ್ಲೋಪ್ರಿಡ್ 0.5 ಗ್ರಾಂ ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಕೀಟದ ಬಾದೆ ಹೆಚ್ಚಾದಾಗ ಪ್ರತಿ ಲೀಟರ್ ನೀರಿನಲ್ಲಿ 1 ಗ್ರಾಂ ಅಸಿಫೇಟ್ 50% + ಇಮಿಡಾಕ್ಲೋಪ್ರಿಡ್ 1.8 % ಎಸ್. ಪಿ. ಅನ್ನು ಬೆರೆಸಿ ಸಿಂಪಡಿಸಬೇಕು. ತೋಟದ ಪರಿಸರದ ವ್ಯವಸ್ಥೆಯಲ್ಲಿ, ಕಪ್ಪು ಶಿಲೀಂಧ್ರವನ್ನು ಭಕ್ಷಿಸುವ ಜೀರುಂಡೆ (L. nilgirianus) ಹುಳಗಳನ್ನು ಸಂರಕ್ಷಿಸಬೇಕು.

ಬಿ. ಪ್ರಿಯಾಂಕಾ ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

08-05-2023
V-karanataka Pg 09

ಬಾಳು ಬೆಳಗಿಸುವ ಬಾಳೆ

ರೈತಗಾಥೆ
ಡಾ. ವಿಜಯ್ ಅಂಗಡಿ



ನಾಡಿನ ಬಹುತೇಕ ಭಾಗಗಳಲ್ಲಿ ಬಾಳೆಯನ್ನು ಬೆಳೆಯಲಾಗುತ್ತಿದೆ. ದಟ್ಟ ಮಲೆನಾಡಿನಿಂದ ಹಿಡಿದು ಬಟ್ಟ ಬಯಲಿನ ಒಣ ಪ್ರದೇಶಗಳಲ್ಲೂ ಬಾಳೆ ಇದೆ. ಬಾಳೆಯಲ್ಲಿ ಹತ್ತಾರು ತಳಿಗಳಿವೆ. ಪುಟ್ಟಬಾಳೆ (ಹೂವು ಬಾಳೆ), ಪಚ್ಚಬಾಳೆ, ನೇಂದ್ರಬಾಳೆ, ಮೈಸೂರು ಕದಳಿ, ರಸಬಾಳೆ, ನಂಜನಗೂಡಿನ ರಸಬಾಳೆ, ಗಾಳಿಬಾಳೆ, ಬೂದುಬಾಳೆ, ಚೀನಾಬಾಳೆ, ಭಾಸ್ಕರಬಾಳೆ, ಏಲಕ್ಕಿಬಾಳೆ, ಇತ್ಯಾದಿ ಹೆಸರಿನ ಬಾಳೆ ತಳಿಗಳಿವೆ.

ಜಗತ್ತಿನಲ್ಲೇ ಅತಿ ಹೆಚ್ಚಾಗಿ ಬಳಕೆಯಾಗುವ ಫಲ ಬಾಳೆಹಣ್ಣು. ಸಿಹಿಯ, ಸುವಾಸನೆಯ ಬಾಳೆಹಣ್ಣನ್ನು ದಿನವೂ ತಿಂದರೆ ಬೇಸರವಾಗುವುದಿಲ್ಲ. ಹಾಲಿನೊಂದಿಗೆ ತುಂಡರಿಸಿಕೊಂಡು ಬೆಲ್ಲ ಇಲ್ಲವೇ ಜೇನುತುಪ್ಪ, ತುರಿದ ತೆಂಗಿನಕಾಯಿಯೊಂದಿಗೆ ಸೇವಿಸಿದಾಗ ಸೊಗಸಾಗಿರುತ್ತದೆ. ನಾಲ್ಕಾರು ಬಾಳೆಹಣ್ಣನ್ನು ಈ ರೀತಿಯಲ್ಲಿ ಬಳಸಿದಾಗ ನಾಲ್ಕಾರು ಗಂಟೆಗಳ ಕಾಲ ಹಸಿವಾಗುವುದಿಲ್ಲ.

ಬಾಳೆಹಣ್ಣು ಒಂದು 'ಸೂಪರ್ ಫುಡ್' ಎಂದು ಉಲ್ಲೇಖವಾಗಿದೆ. ಸೇಬು ಹಣ್ಣಿಗಿಂತ ಇದರಲ್ಲಿ 2 ಪಟ್ಟು ಹೆಚ್ಚು ಶರ್ಕರ ಪಿಷ್ಟಗಳಿವೆ. 5 ಪಟ್ಟು ಅಧಿಕವಾಗಿ ವಿಟಮಿನ್ 'ಎ', 2 ಪಟ್ಟು ಹೆಚ್ಚು ಕಬ್ಬಿಣ, 3 ಪಟ್ಟು ಹೆಚ್ಚು ರಂಜಕ ಪೋಷಕಾಂಶಗಳಿವೆ. ಹೇರಳವಾದ ಪ್ರಮಾಣದಲ್ಲಿ (358 ಮಿ.ಗ್ರಾಂ.) ಪೊಟ್ಯಾಷಿಯಂ ಇದೆ. ಮೆಗ್ನೀಷಿಯಂ, ತಾಮ್ರ, ಕಬ್ಬಿಣ ಸತ್ವಾಂಶಗಳೂ ಇವೆ. ನೂರು ಗ್ರಾಂ ಹಣ್ಣಿನ ಸೇವನೆಯಿಂದ 89 ಕಿಲೋ ಕ್ಯಾಲರಿ ಶಕ್ತಿ ದೊರೆಯುತ್ತದೆ. ಹಣ್ಣಿನಲ್ಲಿ ಶೇ.0.3 ಕೊಬ್ಬು ಇದೆ. 1 ಮಿಲಿಗ್ರಾಂ ಸೋಡಿಯಂ, 25 ಗ್ರಾಂ ಶರ್ಕರ ಪಿಷ್ಟಗಳಿವೆ. 12 ಗ್ರಾಂ ಸಿಹಿ ಅಂಶ ಇದೆ. 2.6 ಗ್ರಾಂ. ನಾರಿನಂಶ, 1.1 ಗ್ರಾಂ ಪ್ರೊಟೀನ್, ವಿಟಮಿನ್ 'ಸಿ', ವಿಟಮಿನ್ 'ಬಿ', ಇವೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ದಿನವೂ ಬಾಳೆ ತಿನ್ನಿ, ಬಾಳೆನಲ್ಲಿ ಖುಷಿಯಾಗಿರಿ ಎಂದು ತಜ್ಞರು ಹೇಳಿದ್ದಾರೆ.

'ಬಡತನ ಅಳಿಸಲು ಬಾಳೆ ಹಾಕು' ಎಂಬ ನಾಣ್ನುಡಿ ಇದೆ. ಏಕ ಬೆಳೆಯಾಗಿ, ಇತರೆ ಬೆಳೆಗಳೊಂದಿಗೆ ಬಾಳೆಯನ್ನು ಬೆಳೆಯುವುದಿದೆ. ಬಿಸಿಲು ಬಯಸುವ ಬಾಳೆಯ ಗಿಡಗಳನ್ನು ತೀರಾ ಸನಿಹದಲ್ಲಿ ನೆಡಬಾರದು. ಒತ್ತೊತ್ತಾಗಿ ಇದ್ದಾಗ ಫಸಲು ಕಮ್ಮಿ. ಹಾಗೆಯೇ ನೆರಳು ಹೆಚ್ಚಿಗಿರುವ ತೋಟಗಳಲ್ಲಿ ಬೆಳವಣಿಗೆ ಸರಿ ಇರುವುದಿಲ್ಲ. ನೀರು ಬಸಿದುಕೊಂಡು ಹೋಗುವಂತಿರುವ ಜಮೀನುಗಳು ಅಪೇಕ್ಷಣೀಯ.

- ಬಿರುಗಾಳಿ ಬಂದಾಗ ಬಾಳೆ ಗಿಡಗಳು ಗೊನೆಗಳೊಂದಿಗೆ ಅಥವಾ ಗಿಡಗಳೇ ನೆಲಕ್ಕುರುಳುವುದಿದೆ. ಆದರೆ, ಗೊನೆ ಬಲಿಯುತ್ತಿರುವಾಗ ನಿಧಾನಕ್ಕೆ ಬಗ್ಗಿಸುತ್ತಾ ಹೋಗಿ ನೆಲಕ್ಕೆ ತಾಗಿಸಿದರೆ ಗೊನೆಯು ಬಲಿಯುತ್ತದೆ. ತಿನ್ನಲು/ ಮಾರಲು ಹಣ್ಣು ಸಿಗುತ್ತವೆ ಎಂದು ಅನುಭವಿ ರೈತ ಮಹಿಳೆ ಹೇಮ ಅನಂತ್ ಅವರು ಹೇಳಿದ್ದಾರೆ. ಹಾಗೆಯೇ ಗೊನೆಯನ್ನು ಒಂದೇ ಸಾರಿಗೆ ಕತ್ತರಿಸುವುದಕ್ಕಿಂತ, ಮೇಲಿಂದ ಒಂದೆರಡು ಚಿಪ್ಪುಗಳನ್ನು ಕೊಯ್ಯುತ್ತಾ, ಬಳಸುತ್ತಾ ಬಂದರೆ ಎರಡ್ಮೂರು ತಿಂಗಳು ಕಾಲ ತಿನ್ನಬಹುದು ಎಂದವರು ಹೇಳಿದ್ದಾರೆ.
- ಗೊನೆಗಳನ್ನು ತೆಗೆದ ಬಳಿಕ ಗಿಡವನ್ನು ಬುಡಕ್ಕೆ ಕತ್ತರಿಸುವುದಕ್ಕಿಂತ ಹಾಗೆಯೇ ಬಿಡುವುದರಿಂದ ಅದರಲ್ಲಿರುವ ನೀರಿನಂಶ, ಪೋಷಕಾಂಶಗಳು ಪಕ್ಕದ ಗಿಡಗಳಿಗೆ ಬಳಕೆ ಆಗುತ್ತವೆ.
- ಮಲೆನಾಡು ಭಾಗಗಳಲ್ಲಿ ಬಹುತೇಕ ರೈತರು ಬಾಳೆಯನ್ನು ತಪ್ಪದೇ ಬೆಳೆಯುತ್ತಾರೆ.



- ಬಾಳೆ ಗೊನೆಗಳು ಬಲಿಯುತ್ತಿರುವಾಗ ಮಂಗಗಳು ಹಾಳು ಮಾಡಲು ಬರುತ್ತವೆ. ಈ ಸಲುವಾಗಿ ಒಂದು ಪ್ಲಾಸ್ಟಿಕ್ ಚೀಲವನ್ನು ಗೊನೆಗೆ ಸೇರಿಸಿ ಕಟ್ಟುವುದು ಸೂಕ್ತ ಎನ್ನುವುದು ಅನುಭವಿ ಕೃಷಿಕರ ಮಾತು.
- ಬಾಳೆಯು ಒಂದೇ ಜಾಗದಲ್ಲಿ 20 ವರ್ಷಗಳಿಗೂ ಮೀರಿ ಮರಿಗಿಡಗಳನ್ನು ಸೃಷ್ಟಿಸಿ ಫಲ ಕೊಟ್ಟಿರುವುದಿದೆ.
- ಕಂದುಗಳಿಂದ ಇಲ್ಲವೇ ಅಂಗಾಂಶ ಕೃಷಿಯ ಸಸ್ಯಗಳನ್ನು ಬಳಸಿಕೊಂಡೂ ಬಾಳೆಯನ್ನು ಸಾಗುವಳಿ ಮಾಡುತ್ತಾರೆ. ಎರಡೂ ಪದ್ಧತಿಗಳಲ್ಲಿ ಇತಿಮಿತಿಗಳಿವೆ. ಬಹಳಷ್ಟು ಪ್ರದೇಶಗಳಲ್ಲಿ ಬಾಳೆಗೆ ರಾಸಾಯನಿಕ ಗೊಬ್ಬರ ಹಾಕದೇ ಬೆಳೆದುಕೊಳ್ಳುವುದಿದೆ. ವಾಣಿಜ್ಯ ದೃಷ್ಟಿಯಲ್ಲಿ ಕೆಲವರು ಅತಿಯಾಗಿ ರಾಸಾಯನಿಕ ಗೊಬ್ಬರ ಮತ್ತು ವಿಷಗಳನ್ನು ಹಾಕುತ್ತಾರೆ.
- ನಮ್ಮ ರಾಜ್ಯದಲ್ಲಿ ಪುಟ್ಟ ಬಾಳೆಗೆ ಒಳ್ಳೆಯ ಧಾರಣೆ ಸಿಗುತ್ತಿದೆ. ಕಮ್ಮಿ ಪ್ರಮಾಣದಲ್ಲಿ ಬೆಳೆಯುವ ಚಂದ್ರಬಾಳೆ ಮತ್ತು ರಸ ಬಾಳೆ ಹಣ್ಣುಗಳಿಗೆ ಅಧಿಕ ಬೆಲೆ ಇರುತ್ತದೆ.

(ಲೇಖಕರು: ಕೃಷಿ ತಜ್ಞರು ಮತ್ತು ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಮಡಿಕೇರಿ)

08-05-2023
V-karanataka add Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

ಉತ್ಪನ್ನಗಳ ಸಂಸ್ಕರಣೆಯಿಂದ ಆದಾಯ ದ್ವಿಗುಣ

■ ಡಾ. ಶ್ವೇತಾ ಬಿ.ಎಸ್.

ಉತ್ತಮ ಬೆಳೆ ಪಡೆದು ಕೊಯ್ಲೋತ್ತರ ನಿರ್ವಹಣೆ ಮಾಡುವುದು ಅತ್ಯುತ್ತಮ ಆದಾಯ ಪಡೆಯುವ ಒಂದು ಮಾರ್ಗ. ಕೊಯ್ಲೋತ್ತರ ಚಟುವಟಿಕೆ ರೈತರ ಆದಾಯ ದ್ವಿಗುಣಕ್ಕೂ ಪೂರಕ.

ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ. ಹಣ್ಣು ಮತ್ತು ತರಕಾರಿಗಳು ಹೆಚ್ಚಿನ ತೇವಾಂಶ ಹೊಂದಿರುವುದರಿಂದ ಬೇಗನೆ ಕೊಳೆಯಬಲ್ಲದು. ಶೇಖರಣೆ ಮಾಡಿಟ್ಟರೆ ತೇವಾಂಶ ಬೇಗನೆ ಕಡಿಮೆಯಾಗುತ್ತದೆ. ಹಣ್ಣು ಮತ್ತು ತರಕಾರಿಗಳ ಅವೈಜ್ಞಾನಿಕ ನಿರ್ವಹಣೆ, ಸರಿಯಾದ ರೀತಿಯಲ್ಲಿ ಪ್ಯಾಕ್ ಮಾಡದೇ ಇರುವುದು, ಅಸಮರ್ಪಕ ಸಾಗಣೆ ಮತ್ತು ಶೇಖರಣೆಯಿಂದ ಕೊಯ್ಲೋತ್ತರ ನಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ರೈತರು ಸಮರ್ಪಕ ಕೊಯ್ಲೋತ್ತರ ನಿರ್ವಹಣೆ ಕ್ರಮಗಳನ್ನು ಅನುಸರಿಸಿದರೆ ಈ ನಷ್ಟ ಕಡಿಮೆ ಮಾಡಿಕೊಂಡು ಆದಾಯ ಹೆಚ್ಚಿಸಿಕೊಳ್ಳಬಹುದು.

ಹಣ್ಣು ಕೆಲವು ತರಕಾರಿಗಳು ಕೆಲವೊಂದು ಕಾಲಕ್ಕೆ ಮಾತ್ರ ಸೀಮಿತ. ಹೀಗಾಗಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ನಿರ್ವಹಣೆ, ಪ್ಯಾಕಿಂಗ್, ಲೇಬಲಿಂಗ್, ಸಮರ್ಪಕ ಸಾಗಾಣಿಕೆ, ಶೇಖರಣೆ ಅರಿತರೆ ಮಾರುಕಟ್ಟೆಯಲ್ಲಿ ಉತ್ತಮ ಆದಾಯ ಪಡೆಯಬಹುದು. ಹಣ್ಣುಮತ್ತು ತರಕಾರಿ ಸಂಸ್ಕರಣೆ ಉದ್ಯಮ ರೈತರಿಗೆ ಒಳ್ಳೆಯ ಕಸುಬು ಕೂಡ.

ಹಣ್ಣು ಸಂಸ್ಕರಣೆ ಮಾಡಿ ತಯಾರಿಸಿದ ಜ್ಯಾಮ್, ಜೆಲ್ಲಿ, ತಂಪು ಪಾನೀಯಗಳು ದಿನೇದಿನೆ ಜನಪ್ರಿಯವಾಗುತ್ತಿವೆ. ಇವರಿಂದ ವರ್ಷದ ಯಾವುದೇ ಕಾಲದಲ್ಲಾದರೂ ಹಣ್ಣು/ತರಕಾರಿಗಳನ್ನು ಸೇವಿಸಲು ಸಾಧ್ಯವಿದೆ. ಹಣ್ಣು ಮತ್ತು ತರಕಾರಿಗಳು ಕೆಡದಂತೆ ಶೀತಕ ಅಥವಾ ಘನೀಕರಿಸುವಿಕೆ, ನಿರ್ಜಲೀಕರಣ, ಬಿಸಿಲಿನಲ್ಲಿ ಒಣಗಿಸುವುದು ಅಥವಾ ರಾಸಾಯನಿಕ ವಿಧಾನಗಳಿಂದ ಅಂದರೆ ಉಪ್ಪು, ಸಕ್ಕರೆ, ಸೋಡಿಯಂ ಬೆನ್ಜೋಯೆಟ್ ಬಳಸಿ ಶೇಖರಿಸಿಡಬಹುದು.

ಕೊಯ್ಲಿನ ನಂತರ ಹಣ್ಣುಮತ್ತು ತರಕಾರಿಗಳನ್ನು ಸೂಕ್ತವಾಗಿ ನಿರ್ವಹಿಸಿದರೆ ಅಧಿಕ ಮೌಲ್ಯ ಪಡೆಯಲು ಸಾಧ್ಯ. ಸರಿಯಾದ ಸಮಯ ಮತ್ತು ವಿಧಾನದಲ್ಲಿ ಕೊಯ್ಲು, ವಿಂಗಡಿಸುವುದು, ತಂಪಾಗಿಸುವುದು, ವರ್ಗೀಕರಿಸುವುದು, ಮಾಗಿಸುವುದು, ಪ್ಯಾಕಿಂಗ್ ಮಾಡುವುದು, ಶೇಖರಣೆ, ಸಾಗಾಣಿಕೆ ಮತ್ತು ಮಾರಾಟ ಇವು ನಿರ್ವಹಣೆಯ ಮುಖ್ಯ ಹಂತಗಳು.



30ಕ್ಕೂ ಅಧಿಕ ಉತ್ಪನ್ನ

ರೈತ ಮಹಿಳೆಯರು, ಸ್ವಸಹಾಯ ಗುಂಪುಗಳು ತಮ್ಮ ಪ್ರದೇಶದಲ್ಲಿ ಲಭ್ಯವಿರುವ ಹಣ್ಣು ತರಕಾರಿಗಳಿಂದ ವಿವಿಧ ಮೌಲ್ಯವರ್ಧನೆ ಉತ್ಪನ್ನಗಳನ್ನು ತಯಾರಿಸಿ ಉದ್ಯಮಶೀಲರಾಗಿದ್ದಾರೆ. ಈ ಮೂಲಕ ಉತ್ತಮ ಆದಾಯ ಪಡೆಯುತ್ತಿದ್ದಾರೆ. ಹಾಸನ ಜಿಲ್ಲೆ ಆಲೂರು ತಾಲೂಕಿನ ಕೆಂಚನಹಳ್ಳಿ ಗ್ರಾಮದ ಲತಾ ಯೋಗಣ್ಣ (ಮೊ.9886284016) ಅವರು ತಮ್ಮ ಜಮೀನಿನಲ್ಲಿ ಬೆಳೆಯುವ ಎಲ್ಲ ಹಣ್ಣು, ಸೊಪ್ಪು ತರಕಾರಿಗಳನ್ನು ಮೌಲ್ಯವರ್ಧನೆ ಮಾಡಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಈ ಮೂಲಕ ಆದಾಯದ ಪ್ರಮಾಣ ಹೆಚ್ಚಿಸಿಕೊಂಡಿದ್ದಾರೆ. ಈ ಕುರಿತು ಇತರ ಮಹಿಳೆಯರಿಗೂ ತರಬೇತಿ ನೀಡುತ್ತಿದ್ದಾರೆ. ಆರೋಗ್ಯದಾಯಕ ಮಾಲ್ಟ್, ವಿವಿಧ ತರಹದ ತರಕಾರಿಗಳ ಉಪ್ಪಿನಕಾಯಿ, ಮಸಾಲಾ ಪೌಡರ್, ವಿವಿಧ ಸೊಪ್ಪುಗಳ ಚಟ್ನಿ ಪುಡಿ, ತಾವೇ ಬೆಳೆದ ವೀಳ್ಯದೆಲೆ- ಅಡಿಕೆಯಿಂದ ಡೈ ಪಾನ್, ಸಪೋಟ ಜಾಮ್, ನೆಲ್ಲಿಕಾಯಿ ತೊಕ್ಕು, ವಿವಿಧ ಹಣ್ಣುಗಳಿಂದ ಮಾಡಿದ ಹಲ್ವಾ, ಹರ್ಬಲ್ ಟೀ ಹೀಗೆ 30 ಕ್ಕೂ ಹೆಚ್ಚಿನ ಉತ್ಪನ್ನಗಳನ್ನು ಅವರು ತಯಾರಿಸುತ್ತಾರೆ. ನಿರಂತರ ಅನ್ವೇಷಣೆಯಿಂದ ಹೊಸ ಹೊಸ ಬಗೆಯ ಉತ್ಪನ್ನಗಳನ್ನು ತಯಾರಿಸುತ್ತಾರೆ. ಲತಾ ಯೋಗಣ್ಣ ಅವರ ಈ ಪರಿಶ್ರಮಕ್ಕೆ ಹಲವು ಪ್ರಶಸ್ತಿಗಳು ಸಂದಿವೆ.

ಶೀತಲ ಘಟಕ: ರೈತರು ಕಡಿಮೆ ವೆಚ್ಚದಲ್ಲಿ ವಿದ್ಯುತ್ ಅವಶ್ಯಕತೆ ಇಲ್ಲದೇ ಸ್ಥಳೀಯವಾಗಿ ಲಭ್ಯವಿರುವ ಇಟ್ಟಿಗೆ, ಮರಳು, ಗೋಣಿ ಚೀಲ ಮುಂತಾದ ವಸ್ತುಗಳಿಂದ ಪರಿಸರ ಸ್ನೇಹಿ- ಶೂನ್ಯ ಶಕ್ತಿ ಶೀತಲ ಘಟಕ ನಿರ್ಮಿಸಿಕೊಂಡು ಹಣ್ಣು ಮತ್ತು ತರಕಾರಿಗಳನ್ನು ಶೇಖರಿಸಿಡಬಹುದು. ಇಲ್ಲಿ ಒಳಗಿನ ಉಷ್ಣತೆಯು ಹೊರಗಿನ ಉಷ್ಣತೆಗಿಂತ ಶೇ. 10-15 ಸೆಂ.ನಷ್ಟು ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಈ ತಂಪು ತೊಟ್ಟಿಯಲ್ಲಿಟ್ಟ ಹಣ್ಣು ತರಕಾರಿಗಳ ಶೇಖರಣೆ ಅವಧಿ 2 ರಿಂದ 3 ಪಟ್ಟು ಹೆಚ್ಚಾಗುವುದು.



ಮಾಗಿಸುವ ವಿಧಾನ: ಗಾಳಿಯಾಡದ ಟೆಂಟ್ ಅಥವಾ ಕೊಠಡಿಯಲ್ಲಿ ಹಣ್ಣುಗಳನ್ನಿಟ್ಟು ಇಥಲೀನ್ ಗ್ಯಾಸ್ ಮೂಲಕ ಮಾವು/ಬಾಳೆ ಹಣ್ಣನ್ನು ಮಾಗಿಸಬಹುದು. ಉಪಚರಿಸಿದ ನಂತರ 24 ಗಂಟೆಗಳ ಕಾಲ ಗಾಳಿಯಾಡದಂತೆ ಟೆಂಟು ಅಥವಾ ಕೊಠಡಿ ಮುಚ್ಚಬೇಕು. ಈ ರೀತಿ ಉಪಚರಿಸಿದ ಹಣ್ಣುಗಳನ್ನು ಗಾಳಿಯಾಡುವ ಸಾಮಾನ್ಯ ಉಷ್ಣಾಂಶಕ್ಕೆ ಸ್ಥಳಾಂತರಿಸಿದ 3-4 ದಿನಗಳಲ್ಲಿ ಮಾಗುತ್ತವೆ. ಬಾಳೆ, ಮಾವನ್ನು ಹಣ್ಣು ಮಾಡುವ ಈ ವಿಧಾನ ಸುರಕ್ಷಿತ. ಆರೋಗ್ಯಕ್ಕೂ ಹಾನಿ ಇಲ್ಲ.

ಸಂಸ್ಕರಣೆ ವಿಧಾನಗಳು: ತರಕಾರಿ ಅಥವಾ ಹಣ್ಣುಗಳ ನಿರ್ಜಲೀಕರಣ, ಒಣಗಿಸಿ ಪುಡಿ ಮಾಡುವುದು, ರಸ ಮತ್ತು ರಸದಿಂದ ಉತ್ಪನ್ನಗಳ ತಯಾರಿಕೆ, ತಿರುಳಿನಿಂದ ಪದಾರ್ಥಗಳ ತಯಾರಿಕೆ, ಉಪ್ಪಿನಕಾಯಿ ತಯಾರಿಸಬಹುದು.

ಸೊಪ್ಪು ಮತ್ತು ಕೆಲವು ತರಕಾರಿಗಳನ್ನು ಬಿಸಿಲಿನಲ್ಲಿ ಒಣಗಿಸಿ ಶೇಖರಿಸಿಡಬಹುದು. ಅಥವಾ ಸೌರಶಕ್ತಿ ಚಾಲಿತ ಉಪಕರಣ, ವಿದ್ಯುತ್ ಚಾಲಿತ ಒಣಗಿಸುವ ಯಂತ್ರಗಳಿಂದ ಅಥವಾ ನೆರಳಿನಲ್ಲಿ ಒಣಗಿಸಿ ಶೇಖರಿಸಿಡಬಹುದು. ಪೇರಲ, ಪಪ್ಪಾಯ, ಕಿತ್ತಳೆ, ಬಾಳೆ, ಸೇಬು, ಸಪೋಟ ಮುಂತಾದ ಹಣ್ಣುಗಳಿಂದ ಜ್ಯಾಮ್, ಹಣ್ಣಿನ ಬಾರ್, ಜೆಲ್ಲಿಮಾಡಿ ವರ್ಷವಿಡೀ ಶೇಖರಿಸಿಡಬಹುದು. ರಾಸಾಯನಿಕಗಳಾದ ವಿನೇಗರ್, ಸಿಟ್ರಿಕ್ ಆಮ್ಲ, ಸೋಡಿಯಂ ಬೆನ್ಜೋಯೆಟ್, ಸೋಡಿಯಂ ಅಥವಾ ಪೊಟಾಷಿಯಂ ಮೆಟಾಬೈಸಲ್ಫೇಟ್ ಇವುಗಳು ಹಣ್ಣಿನ ರಸ, ಉಪ್ಪಿನಕಾಯಿ, ಜ್ಯಾಮ್, ಜೆಲ್ಲಿ, ಮತ್ತು ಸ್ಕ್ವಾಷ್‌ಗಳನ್ನು ಬಹಳ ಚೆನ್ನಾಗಿ ಸಂರಕ್ಷಿಸುತ್ತವೆ.

ಕೃಷಿ ಉತ್ಪನ್ನ ಸಂಸ್ಕರಣೆ ತಂತ್ರಜ್ಞಾನ

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕೊಯ್ಲೋತ್ತರ ತಂತ್ರಜ್ಞಾನ ವಿಭಾಗ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆಯಲ್ಲಿ ಹಲವಾರು ಸಂಶೋಧನೆಯನ್ನು ಕೈಗೊಂಡಿದೆ. ಹಲಸು, ಸಪೋಟ, ನೇರಳೆ, ಬೇಲದ ಹಣ್ಣು ಪುನರ್ಪಳಿ, ಗೋಡಂಬಿ ಹಣ್ಣಿನಂತ ಕಿರು ಹಣ್ಣಿನಲ್ಲಿ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿದ್ದು ರೈತರಿಗೆ ಈ ತಂತ್ರಜ್ಞಾನ ತಿಳಿಸಿ ಕೊಡಲಾಗುತ್ತಿದೆ. ಕೊಯ್ಲೋತ್ತರ ನಿರ್ವಹಣೆ ಮತ್ತು ಸಂಸ್ಕರಣೆಗೆ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನಾ, ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಯೋಜನೆಗಳಡಿಯಲ್ಲಿ ತೋಟಗಾರಿಕೆ ಉತ್ಪನ್ನಗಳ ಶೀತಲ ಘಟಕಗಳ ನಿರ್ಮಾಣ ಹಾಗೂ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡುತ್ತಿದೆ. ರೈತರು ಈ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೊಯ್ಲೋತ್ತರ ನಿರ್ವಹಣೆಯಿಂದ ಉತ್ತಮ ಲಾಭಗಳಿಸಬಹುದು. ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ತರಬೇತಿ ಆಯಾ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ ಅಥವಾ ಸಮೀಪದಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯಗಳಲ್ಲಿ ಲಭ್ಯವಿದೆ.

ಪ್ರಶ್ನೋತ್ತರ



-ಡಾ.ವಿ.ಐ.ಬೆಣಗಿ
ವಿಶ್ರಾಂತ ಕುಲಪತಿ,
ಕೃಷಿ ವಿವಿ,ಧಾರವಾಡ

1 ಪೇರಲ ಗಿಡಗಳಿಗೆ ಇರುವೆಗಳು ಮುತ್ತುತ್ತವೆ. ಎಲೆಗಳಿಗೆ ಬಿಳುಪು ಆವರಿಸುತ್ತಿದೆ. ಪರಿಹಾರ ಸೂಚಿಸಿ.

- ಮಾರುತಿ ಭೋಸಲೆ ಕೋಥಳಿ

ಪೇರಲ ಗಿಡಗಳಿಗೆ ಹಿಟ್ಟು ತಿಗಣೆ ಬಾಧೆ ಆಗಿರಬಹುದು. ಬಿಳಿ ಹಿಟ್ಟಿನಂತಹ ತಿಗಣೆಗಳು ಗುಂಪಿನಲ್ಲಿ ಇದ್ದು ಎಲೆಗಳಿಂದ ಮತ್ತು ಕಾಯಿಗಳಿಂದ ರಸ ಹೀರುತ್ತವೆ. ಕೀಟದ ಮಲ ಸಿಹಿ ಇರುವ ಕಾರಣ ಇರುವೆಗಳು ಮುತ್ತುತ್ತವೆ. ಇಂತಹ ಭಾಗಗಳಲ್ಲಿ ಬೂಸ್ಟ್ ಬೆಳವಣಿಗೆ ಆಗುತ್ತದೆ. ಈ ಹಿಟ್ಟು ತಿಗಣೆಗಳ ಶರೀರದ ಮೇಲೆ ಮೇಣದ ತರಹದ ವಸ್ತು ಆವರಿಸಿ ಇರುವುದರಿಂದ ಕೇವಲ ಕೀಟನಾಶಕ ಸಿಂಪರಣೆಯಿಂದ ಪರಿಣಾಮಕಾರಿ ಆಗುವುದಿಲ್ಲ. ಕಾರಣ ಮೇಣವನ್ನು ವಿಭಜಿಸಿ ಔಷಧ ಒಳಸೇರಲು ಮೀನು ಎಣ್ಣೆ ಸಾಬೂನು 5 ಗ್ರಾಂ + ಕೀಟನಾಶಕವಾಗಿ 1.5 ಮಿಲಿ ಪೋಸಲೋನ್ 35 ಇಸಿ ಅಥವಾ ಬೇವಿನ ಎಣ್ಣೆ 5 ಮಿಲಿ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬಹುದು.

2 ಸಿಹಿ ಇಲ್ಲದ ನೀರಿನಲ್ಲಿ (ಸವಳು) ಯಾವ ಬೆಳೆಯನ್ನು ಬೆಳೆದರೆ ಲಾಭದಾಯಕ?

- ರಾಯಬಾಗ ತಾಲೂಕಿನ ರೈತ

ತಾವು ಒಮ್ಮೆ ಕೃಷಿಗಾಗಿ ಉಪಯೋಗಿಸುವ ನೀರನ್ನು ಪರೀಕ್ಷೆ ಮಾಡಿಸಿ, ಇದಕ್ಕಾಗಿ ತುಕ್ಕಾನಟ್ಟಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ಮಾಡಿ. ನೀರಿನ ಮಾದರಿ ಕೊಟ್ಟುವರದಿ ಪಡೆಯಿರಿ. ನೀರಿನಲ್ಲಿ ಕರಗುವ ಲವಣದ ಸಾಂದ್ರತೆ (4ಕ್ಕಿಂತ ಕಡಿಮೆ), ಸೋಡಿಯಂ ಹೀರುವಿಕೆಯ ಅನುಪಾತ (10 ಕ್ಕಿಂತ ಕಡಿಮೆ) ಮತ್ತು ಉಳಿಕೆ ಸೋಡಿಯಂ ಕಾರ್ಬೋನೇಟ್ (2.5 ಕ್ಕಿಂತ ಕಡಿಮೆ) ಇದ್ದರೆ ನೀರಿನ ಗುಣಮಟ್ಟ ಉತ್ತಮ ಇದೆ ಎಂದು ಹೇಳಬಹುದು. ಬೋರಾನ್ ಪ್ರಮಾಣ 1 ಪಿ.ಪಿ.ಎಂ.ಕ್ಕಿಂತ ಕಡಿಮೆ ಇರಬೇಕು. ಸವಳು ನೀರು ಇದ್ದಲ್ಲಿ ಸವಳು ಸಹಿಷ್ಣುತೆಯುಳ್ಳ ತಳಿಗಳನ್ನು ಆಯ್ದುಕೊಳ್ಳಬೇಕು. ಹತ್ತಿ, ಕುಸುಬೆ, ಗೋದಿ ಮತ್ತು ಸಾಸಿವೆ ಬೆಳೆಯಬಹುದು. ಹೆಚ್ಚಿನ ಪ್ರಮಾಣದ ಬೀಜವನ್ನು ಉಪಯೋಗಿಸಬೇಕು. ಸವಳು ಮತ್ತು ಕಾಲುವೆ ನೀರು ಎರಡನ್ನೂ ವ್ಯವಸ್ಥಿತವಾಗಿ ಬಳಸುವುದು. ಸವಳು ನೀರನ್ನು ಬೆಳವಣಿಗೆಯ ಕೊನೆಯ ಹಂತಗಳಲ್ಲಿ ಹೆಚ್ಚಾಗಿ ಉಪಯೋಗಿಸಬಹುದು. ಮಣ್ಣಿಗೆ ಸಾಕಷ್ಟು ಸಾವಯವ ವಸ್ತುಗಳಾದ ತಿಪ್ಪೆಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಹಸಿರೆಲೆ ಗೊಬ್ಬರಗಳಾದ ಡೈಂಚಾ, ಸೆಣಬು, ಗ್ಲಿರಿಸೀಡಿಯಾ ಸೇರಿಸುವುದರಿಂದ ಸವಳು ನೀರಿನಿಂದ ಆಗುವ ಕೆಟ್ಟ ಪರಿಣಾಮಗಳನ್ನು ಕಡಿಮೆ ಮಾಡಬಹುದು. ಇವುಗಳ ಜೊತೆಗೆ ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಶೇ. 10 ರಷ್ಟು ಹೆಚ್ಚಿನ ಪ್ರಮಾಣದ ಸಾರಜನಕ ಮತ್ತು ರಂಜಕವನ್ನು ಬೆಳೆಗೆ ಒದಗಿಸಬೇಕು.

ಕೃಷಿ ಪ್ರಶ್ನೆಗಳನ್ನು ವಿವರವಾಗಿ ವಾಟ್ಸ್ಆ್ಯಪ್ ಮಾಡಿ; ನಿಮ್ಮ ಹೆಸರು ಹಾಗೂ ಊರು ಯಾವುದು ತಿಳಿಸಿ.

78998 58866

ಇ ಮೇಲ್: krushi@vijaykarnataka.com

VK ಕೃಷಿ
ಮಣ್ಣಿನ ಮಕ್ಕಳ ಮನದ ಮಾತು

ಶಿಲೀಂಧ್ರ ಚರ್ಮರೋಗದ ಪರಿಣಾಮಗಳು

ಜಾನುವಾರುಗಳಿಗೆ ಶಿಲೀಂಧ್ರ ಮೂಲದ ಅನೇಕ ಚರ್ಮರೋಗಗಳು ಬಾಧಿಸುತ್ತವೆ. ಇವು ಪಶುಗಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತವೆ.

ಶಿಲೀಂಧ್ರದಿಂದ ಬರುವ ಚರ್ಮರೋಗದಲ್ಲಿ ಡರ್ಮಟೋಫೈಟೋಸಿಸ್, ಆಸ್ಪಾರ್ಜಿಲ್ಲೋಸಿಸ್, ಮಲಾಸೆಝಿಯಾ ಹೊರ ಕಿವಿಯ ಚರ್ಮರೋಗ, ಪೈಥಿಯೋಸಿಸ್ ಹಾಗೂ ಫಿಯೊಹೈಫೋಮೈಕೋಸಿಸ್ ಪ್ರಮುಖವಾದವು. ಶಿಲೀಂಧ್ರದಿಂದ ಉಂಟಾಗುವ ಯಾವುದೇ ಚರ್ಮರೋಗವಿರಲಿ ತುಂಬಾ ಕೆರೆತ, ಸದಾ ತೇವಾಂಶ, ಕೀವು ಇರುತ್ತದೆ.

ಡರ್ಮಾಟೋಫೈಟೋಸಿಸ್: ಈ ಕಾಯಿಲೆಗೆ 'ರಿಂಗ್ ವರ್ಮ್' ಎಂದೂ ಹೇಳಲಾಗುತ್ತದೆ. ಇದು ಟ್ರೈಕೋಫೈಟೋನ್ ವೆರ್ರುಕೋಸಮ್‌ನಿಂದ ಉಂಟಾಗುತ್ತದೆ. ಟ್ರೈಕೋಫೈಟೋನ್ ಮೆಂಟಗ್ರೊಫೈಟ್,ಟ್ರೈಕೋಫೋಟೋನ್ ಜಿಪ್ಸಿಯಂ ಇತ್ಯಾದಿಗಳಿಂದಲೂ ಈ ರೋಗ ಬರುತ್ತದೆ. ಮುಖ, ಹಣೆ, ಕುತ್ತಿಗೆ, ಬೆನ್ನು, ಬಾಲ, ಹಿಂಬಾಗ ಇತ್ಯಾದಿ ಹಲವೆಡೆ ಚರ್ಮ ರೋಗ ಕಾಣಿಸಿಕೊಳ್ಳುತ್ತದೆ. ಇದು ಮನುಷ್ಯನಿಗೆ ಪ್ರಾಣಿಗಳಿಂದ ಬರುವ ಪ್ರಮುಖ ಕಾಯಿಲೆಯಾಗಿದ್ದು ಇದರ ಬಗ್ಗೆ ಬಹಳ ಎಚ್ಚರ ವಹಿಸುವುದು ಅಗತ್ಯ.

ಆಸ್ಪಾರ್ಜಿಲ್ಲೋಸಿಸ್: ಇದರಿಂದ ಉಂಟಾಗುವ ಚರ್ಮದ ಕಾಯಿಲೆ ಅನೇಕ ರೀತಿಯ ಆಸ್ಪಾರ್ಜಿಲಸ್ ವರ್ಗಕ್ಕೆ ಸೇರಿದ ಶಿಲೀಂಧ್ರಗಳಿಂದ ಉಂಟಾಗುತ್ತದೆ. ಸಾಮಾನ್ಯವಾಗಿ ಇದು ಪಶುಗಳಲ್ಲಿ ಗರ್ಭಪಾತವನ್ನುಂಟು ಮಾಡುತ್ತದೆ. ಸತ್ತು ಹುಟ್ಟಿದ ಕರುವಿನ ಚರ್ಮದ ಮೇಲೆ ಚರ್ಮರೋಗದ ಕುರುಹುಗಳಿರುತ್ತವೆ. ಇವು ಕರುವಿನ ಇಡೀ ಶರೀರವನ್ನು ವ್ಯಾಪಿಸಿರಬಹುದಾಗಿದ್ದು, ಹಳದಿ- ಬಿಳಿ, ಹಳದಿ- ಕಂದು ಬಣ್ಣದ್ದಾಗಿದ್ದು ಆಸ್ಪಾರ್ಜಿಲಸ್ ಫ್ಯುಮಿಗೇಟಸ್ ಶಿಲೀಂಧ್ರದಿಂದ ಉಂಟಾಗುತ್ತದೆ.



ಮಲಾಸೆಝಿಯಾ ಹೊರಕಿವಿ ಚರ್ಮರೋಗ: ನಾಯಿಗಳಲ್ಲಿ ಕಿವಿಯ ಊತವನ್ನುಂಟು ಮಾಡುವ ಕಾಯಿಲೆ ಇದು ಪಶುಗಳನ್ನೂ ಬಾಧಿಸುತ್ತದೆ. ಮಲಾಸೆಝಿಯಾಸಿಂ ಪೋಡಯಾಲಿಯ ಮತ್ತು ಮಲಾಸೆಝಿಯಾಗ್ಲೋಬೋಸಾ ಶಿಲೀಂಧ್ರದಿಂದ ಈ ರೋಗ ಉಂಟಾಗುತ್ತದೆ. ಆದರೆ ಇತರ ಶಿಲೀಂಧ್ರಗಳಿಗೆ ಹೋಲಿಸಿದಲ್ಲಿ ಪಶುಗಳಲ್ಲಿ ಇದರ ಕಾಟ ಕಡಿಮೆ ಅಥವಾ ಅಪರೂಪ ಎನ್ನಬಹುದು.

ಪೈಥಿಯೋಸಿಸ್: ಇದೊಂದು ವಿರಳವಾದ ಪಶು ಚರ್ಮರೋಗವಾಗಿದ್ದು ಕೆಲವು ದೇಶಗಳಲ್ಲಿ ಪಶುಗಳಲ್ಲಿ ತೊಂದರೆಯನ್ನುಂಟುಮಾಡುತ್ತಿದೆ. ಇದು ಪೈಥಿಯಮ್ ಇನ್ಸಿಡಿಯೋಸಮ್ ಶಿಲೀಂಧ್ರದಿಂದ ಬರುತ್ತದೆ. ಚರ್ಮದ ಮೇಲೆಗಂಟುಗಳು, ಗಾಯಗಳು ಮತ್ತು ಹುಣ್ಣುಗಳನ್ನುಂಟು ಮಾಡುತ್ತದೆ. ಇದಕ್ಕೆ ಕೂಡ ಉತ್ತಮ ಎನ್ನುವಂಥ ಚಿಕಿತ್ಸೆಯಿಲ್ಲ

ಫಿಯೊಹೈಫೋಮೈಕೋಸಿಸ್: ಹುಣ್ಣುಗಳಾಗಿ, ಒಡೆದು ಸೋರುವ ಮತ್ತು ಸದಾ ಕೀವಿನಿಂದ ಕೂಡಿದ ಕಾಯಿಲೆ ಇದು. ಡ್ರೆಶ್ಲೆರಾರೋಸ್ಟ್ರಾಟಾ ಅಥವಾ ಡ್ರೆಶ್ಲೆರಾ ಸ್ಪೆಸಿಫೆರಾ ಶಿಲೀಂಧ್ರಗಳಿಂದ ಈ ರೋಗ ಬರುತ್ತದೆ. ತೊಡೆ, ಪಕ್ಕೆಲಬು, ಮೂತಿ, ಬಾಲ, ತೊಡೆಗಳ ಸಂಧಿಯಲ್ಲಿ ಗಾಯಗಳಂತ ಹುಣ್ಣುಗಳಾಗುತ್ತವೆ.

ಚಿಕಿತ್ಸೆ: ಪಶುಗಳ ಎಲ್ಲ ಚರ್ಮರೋಗಗಳಿಗೂ ಸೂಕ್ತ ಶಿಲೀಂಧ್ರ ನಾಶಕ ಔಷಧ ಅಥವಾ ವಿಟ್ ಫೀಲ್ಡ್ ಮುಲಾಮು ಹಚ್ಚುವುದು ಸಾಮಾನ್ಯ ಚಿಕಿತ್ಸೆ, ಮನುಷ್ಯನಲ್ಲಿ ಬಳಕೆಯಾಗುವ ಕೆಟಕೊನಝೋಲ್, ಮೈಕನಝೋಲ್ ಇತ್ಯಾದಿಗಳು ದುಬಾರಿಯಾಗಿರುವುದರಿಂದ ಮತ್ತು ಪಶುಗಳಿಗೆ ಜಾಸ್ತಿ ಪ್ರಮಾಣದಲ್ಲಿ ಬೇಕಾಗುವುದರಿಂದ ಶಿಲೀಂಧ್ರ ಪೀಡೆಯ ಚರ್ಮರೋಗದ ಚಿಕಿತ್ಸೆ ಪಶುಗಳಲ್ಲಿ ಕಷ್ಟಸಾಧ್ಯವಾಗಿದೆ ಎನ್ನಬಹುದು. ಚಿಕಿತ್ಸೆಯನ್ನು ಸಾಧಾರಣವಾಗಿ 8 ವಾರ ನಡೆಸಿದರೆ ಕಾಯಿಲೆಯಿಂದ ಮುಕ್ತಿಸಿಗಬಹುದು. ಆದರೂ ಕಾಯಿಲೆ ಮರುಕಳಿಸುವ ಸಾಧ್ಯತೆ ಜಾಸ್ತಿ. ಕೆಲವೊಮ್ಮೆ ಆಯೋಡೀನ್ ಟಿಂಕ್ಚರ್ ಇದಕ್ಕೆ ಪರಿಣಾಮಕಾರಿ. ಕ್ಲೋರಿನ್‌ಯುಕ್ತ ದ್ರಾವಣಗಳು ಕೂಡ ಪರಿಣಾಮಕಾರಿ.

ರೋಗತಡೆ: ಕೊಟ್ಟಿಗೆಯಲ್ಲಿ ಯಾವುದೇ ಪಶುವಿಗೆ ಶಿಲೀಂಧ್ರ ಪೀಡೆ ಕಂಡು ಬಂದರೆ ಕೂಡಲೇ ಇತರ ಪಶುಗಳನ್ನು ಅಲ್ಲಿಂದ ಪ್ರತ್ಯೇಕಿಸಬೇಕು. ಸೋಂಕಿತ ಹಸುವಿಗೆ ಬಳಸಿದ ಯಾವುದೇ ವಸ್ತುಗಳನ್ನು ಇತರ ಜಾನುವಾರುಗಳಿಗೆ ಬಳಬಾರದು. ಇಡೀ ಕೊಟ್ಟಿಗೆಯನ್ನು ಶಿಲೀಂಧ್ರ ನಾಶಕ ದ್ರಾವಣದಿಂದ ತೊಳೆಯುತ್ತಾ ಇರಬೇಕು. ತೇವಾಂಶದಿಂದ ಕೆಲವೊಮ್ಮೆ ಶಿಲೀಂಧ್ರ ಪೀಡೆಯಾಗುವ ಸಾಧ್ಯತೆ ಇದ್ದು ಪಶುವಿನ ಮೈಯನ್ನು ಮತ್ತು ಕೊಟ್ಟಿಗೆಯನ್ನು ಸದಾ ಒಣದಾಗಿಟ್ಟುಕೊಳ್ಳುವುದು ಅವಶ್ಯಕ. ಹೊಸ ಪಶುಗಳನ್ನು ಖರೀದಿ ಮಾಡಿ ಕೊಟ್ಟಿಗೆಗೆ ತಂದಾಗ ಅದು ರೋಗಮುಕ್ತವಾಗಿದೆ ಎಂದು ಖಚಿತಪಡಿಸಿಕೊಂಡ ನಂತರವೇ ಇತರ ಪಶುಗಳ ಜತೆ ಬೆರೆಯಲು ಬಿಡಬೇಕು.

08-05-2023
V-karanataka Pg 08